ಗುರುತಿಸಿದ್ದು, ಈ ಪೈಕಿ ನಶಿಸಿ ಹೋಗುತ್ತಿರುವ 80 ಸಸ್ಯಗಳನ್ನು ಕೆಂಪು .ವಿಜಯಶಂಕರ್ ಮಾ

# 498ಎ ಕಾಯಿದೆ ತಿದ್ದುಪಡಿ: ಅಭಿಪ್ರಾಯಗಳಿಗೆ ಆಹ್ವಾನ

■ ವಿಕ ಸುದ್ದಿಲೋಕ ಬೆಂಗಳೂರು

ದುರ್ಬಳಕೆಯಾಗುತ್ತಿರುವ 498ಎ ಕಾಯಿದೆಯನ್ನು ತಿದ್ದುಪಡಿ ಮಾಡಲು ಸಾರ್ವಜನಿಕ ಅಭಿಪ್ರಾಯಗಳನ್ನು ಆಹ್ವಾನಿಸಲಾಗಿದೆ. ನೊಂದವರು ತಮ್ಮ ಅನಿಸಿಕೆಗಳನ್ನು ಸಲ್ಲಿಸುವಂತೆ ಇಂಟರ್‌ನ್ಯಾಷನಲ್ ಫ್ಯಾಮಿಲಿ ಹಾರ್ಮೊನಿ ಸೊಸೈಟಿ ಒತ್ತಾಯಿಸಿದೆ.

ವರದಕ್ಷಿಣೆ ಕಿರುಕುಳ ತಡೆ ಸೇರಿದಂತೆ ಮಹಿಳೆಯರ ರಕ್ಷಣೆಗಾಗಿ 498ಎ ಕಾಯಿದೆ ಜಾರಿಗೊಳಿಸಲಾಗಿದೆ. ಆದರೆ, ಶೇ.90ಕ್ಕೂ ಹೆಚ್ಚು ಮಹಿಳೆಯರು ಇದನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಹೀಗಾಗಿ, ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಸಂಸತ್ ಈ ಕಾಯಿದೆಯ ತಪ್ಪು-ಒಪ್ಪುಗಳನ್ನು ಪರಿಶೀಲಿಸಿ ತಿದ್ದುಪಡಿ ಮಾಡಲು ಸಾರ್ವಜನಿಕರು, ಸ್ವಯಂ ಸೇವಾ ಸಂಸ್ಥೆಗಳಿಂದ ಅಭಿಪ್ರಾಯಗಳನ್ನು ಆಹ್ವಾನಿಸಿದೆ ಎಂದು ಸೊಸೈಟಿ ಪ್ರಧಾನ ಕಾರ್ಯದರ್ಶಿ ಎಂ. ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ತಿಳಿಸಿದರು.

ಈ ಕಾಯಿದೆಯಡಿ ಒಮ್ಮೆ ದೂರು ನೀಡಿದರೆ ಗಂಡ ಮಾತ್ರವಲ್ಲ, ಆಕೆ ದುರುದ್ದೇಶಪೂರ್ವಕವಾಗಿ ಕುಟುಂಬದ ಎಲ್ಲ ಸದಸ್ಯರ ಹೆಸರು ಸೇರಿಸುತ್ತಾಳೆ. ಆಗ ಎಲ್ಲರೂ ಜೈಲಿಗೆ ಹೋಗಬೇಕು. ಇದರಲ್ಲಿ ಜಾಮೀನು ಕೂಡ ಸಿಗುವುದಿಲ್ಲ. ಪುರುಷರು ನ್ಯಾಯಾಲಯಕ್ಕೆ ಅಲೆಯುವಂತಾಗಿದೆ. ಆದ್ದರಿಂದ ಎಲ್ಲ ನೊಂದವರೂ ಡಿ.30ರೊಳಗೆ ತಮ್ಮ ಅಭಿಪ್ರಾಯಗಳನ್ನು ಸಲ್ಲಿಸಿ ತಿದ್ದುಪಡಿಗೆ ಸಹಕರಿಸಬೇಕು ಎಂದರು.

ಕಾಯಿದೆಯಲ್ಲಿ ಲಿಂಗ ಭೇದವಿಲ್ಲದೆ ದೂರು ನೀಡುವ ಅವಕಾಶ ಕಲ್ಪಿಸಬೇಕು. ಒಮ್ಮೆ ದೂರು ಬಂದಾಗ ತನಿಖೆಯ ನಂತರವೇ ಬಂಧಿಸುವುದು ಮತ್ತಿತರ ಬೇಡಿಕೆಗಳಿಗನುಗುಣವಾಗಿ ತಿದ್ದುಪಡಿ ಮಾಡುವಂತೆ ಒತ್ತಾಯಿಸಲಾಗಿದೆ. ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು ನೇರವಾಗಿ ಸಂಸತ್‌ಗೆ ಅಥವಾ ಸೊಸೈಟಿ ಮೂಲಕ ಸಲ್ಲಿಸಬಹುದು ಎಂದರು. ಸೊಸೈಟಿ ಅಧ್ಯಕ್ಷ ಪಿ. ಸುರೇಶ್, ಸದಸ್ಯ ಉಮೇಶ್ ಉಪಸ್ಥಿತರಿದ್ದರು.

ಹೆಚ್ಚಿನ ಮಾಹಿತಿಗೆ ಮೊಬೈಲ್: 97315 69970.